

# ನಕ್ಕುಬಿಡಿ

**ಆಕೆ:** ನಾನು ಕವಿತೆ ಬರೆಯಲು ಕುಳಿತರೆ, ನಿನ್ನ ನೆನಪು ಆಗುತ್ತದೆ.
**ಆತ:** ಏಕೆ? ನಾನು ನೆನಪಾಗುವುದು?
**ಆಕೆ:** ನಿನ್ನೆ ನನ್ನ ಪೆನ್ನು ತೆಗೆದುಕೊಂಡು ಹೋದೆ, ಇನ್ನೂ ತಂದು ಕೊಟ್ಟಿಲ್ಲವಲ್ಲ ಅಂತ.

**ರಂಗಪ್ಪ:** ಭೀಮಪ್ಪ ನಿನ್ನ ಮಗನನ್ನು ಧೈರ್ಯವಂತನಾಗಿ ಮಾಡಲು ಹೇಳುತ್ತಿದ್ದೆಯಲ್ಲ ಆತ ಧೈರ್ಯವಂತನಾದನೆ?
**ಭೀಮಪ್ಪ:** ಆತನೇನೋ ಧೈರ್ಯವಂತನಾದ. ಆದರೆ...
**ರಂಗಪ್ಪ:** ಏನಾಯ್ತು?
**ಭೀಮಪ್ಪ:** ಆತ ನಾನು ಮನೆಯಲ್ಲಿ ಇಟ್ಟಿದ್ದ 5 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ.

**ಅನಂತ:** ರಾಜು ನೀನು ಪತ್ತೇದಾರಿ ಕಾದಂಬರಿಯನ್ನು ಮಧ್ಯ ಭಾಗದಿಂದ ಓದಲು ಪ್ರಾರಂಭಿಸುವೆಯಲ್ಲ ಏಕೆ?
**ರಾಜು:** ಹಾಗೆ ಓದಿದರೆ ಅಂತ್ಯದ ಬಗ್ಗೆಯಲ್ಲದೆ, ಪ್ರಾರಂಭದ ಬಗ್ಗೆಯೂ ಕುತೂಹಲ ಮೂಡುತ್ತದೆ.

**ಡಾಕ್ಟರ್:** ನೀವು ನನ್ನ ಬಳಿ ಬರುವ ಮೊದಲು, ಯಾವ ಡಾಕ್ಟರ್ ಬಳಿ ಹೋಗಿದ್ರಿ?
**ಆತ:** ಈ ಬಡಾವಣೆಯಲ್ಲಿರುವ ಚಂದ್ರು ಡಾಕ್ಟರ್ ಬಳಿ ಹೋಗಿದ್ದೆ.
**ಡಾಕ್ಟರ್:** ಆತ ನಿಮಗೆ ಮೂರ್ಖ ಸಲಹೆಯನ್ನು ಕೊಟ್ಟಿರಬೇಕು ಅಲ್ಲವೇ?
**ಆತ:** ಹೌದು, ಅವರು ನಿಮ್ಮ ಬಳಿ ಹೋಗಿ ಎಂದು ಕಳಿಸಿದರು.

**ಸಂದರ್ಶಕ:** ಮಿಸ್ಟರ್ ಮುಕುಂದ ಈ ಹಿಂದೆ ಯಾವುದಾದರೂ ಕಂಪನಿಯಲ್ಲಿ ಕೆಲಸ ಮಾಡಿದ್ದೀರಾ?
**ಮುಕುಂದ:** ಮಾಡಿದ್ದೇನೆ ಸಾರ್!
**ಸಂದರ್ಶಕ:** ಹಾಗಾದರೆ ನೀವು ಆ ಕಂಪನಿ ಬಿಡಲು ಕಾರಣ?
**ಮುಕುಂದ:** ಸರ್, ಆ ಕಂಪನಿ ಬೇರೆ ಕಡೆ ಸ್ಥಳಾಂತರವಾಯಿತು. ಅದನ್ನು ಅವರು ನನಗೆ ತಿಳಿಸಲೇ ಇಲ್ಲ.

**ತಂದೆ:** ನೋಡಮ್ಮ ನಿನಗೆ ಸರಿಹೊಂದುವಂಥ ಗುಣಗಳು ಆ ಹುಡುಗನಲ್ಲಿ ಯಾವುದೂ ಇಲ್ಲ.
**ಮಗಳು:** ಯಾಕಿಲ್ಲಪ್ಪ ಆತ ಫೈವ್ ಸ್ಟಾರ್ ಹೋಟೆಲಿನಲ್ಲಿ ಕಿಚನ್ ಅಸಿಸ್ಟೆಂಟ್ ಅಂತೆ.

**ಸರೋಜ:** ಕಮಲ ನಿಮ್ಮ ಮೈದುನನ ಹೆಂಡತಿ ಬಗ್ಗೆ ಏನೋ ಹೇಳಬೇಕಿತ್ತು, ಆದರೆ ನನಗೆ ಬೇರೆ ಗಂಟಲು ನೋವು.
**ಕಮಲ:** ಒಳಗೆ ಬನ್ನಿ ಸರೋಜ, ಕಷಾಯ ಮಾಡಿಕೊಡುತ್ತೇನೆ. ಅದೇನು ಹೇಳಿ ಹೋಗುವಿರಂತೆ.

**ನಾಣಿ:** ಈ ಪ್ಯಾರಾಚೂಟ್ ಸರಿ ಇದೆ ಅಂತೀರಾ, ನಾವು ವಿಮಾನದಿಂದ ಜಿಗಿದಾಗ ಓಪನ್ ಆಗದಿದ್ರೆ?
**ವ್ಯಾಪಾರಿ:** ಅದಕ್ಕೆ ನೀವೇನು ಯೋಚಿಸಬೇಡಿ. ವಾಪಸ್ ತಂದು ಕೊಡಿ, ನಿಮ್ಮ ಹಣ ವಾಪಸ್ಸು ಕೊಡುತ್ತೇವೆ.


**ಸಂದರ್ಶಕ:** ಮಿಸ್ಟರ್ ರಾಮು ನಿಮಗೆ ಯಾವುದೇ ದುರಭ್ಯಾಸಗಳು ಇಲ್ಲ ಅಂತೀರಿ, ಹಾಗಾದರೆ ನಿಮಗೆ ಬಹಳ ಸಂತೋಷ ಕೊಡುವ ಯಾವುದಾದರೂ ಅಭ್ಯಾಸವಿದೆಯಾ?
**ರಾಮು:** ನನಗೆ ತುಂಬಾ ಸಂತೋಷ ಕೊಡುವುದು ಸುಳ್ಳು ಹೇಳುವುದು ಮಾತ್ರ.

**ಪೊಲೀಸ್:** ಕುಡಿದು ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೋಗುತ್ತಿರುವೆ?
**ಆತ:** ಕುಡಿತದ ಬಗ್ಗೆ ಭಾಷಣ ಕೇಳೋದಕ್ಕೆ.
**ಪೊಲೀಸ್:** ಈ ವೇಳೆಯಲ್ಲಿ ಯಾರು ಭಾಷಣ ಮಾಡೋರು?
**ಆತ:** ಮನೇಲಿ ನನ್ನ ಹೆಂಡತಿ ಸಾರ್!

**ನಳಿನಿ:** ಲಲಿತಾ ನಾನು ಮದುವೆ ಆಗುವ ಹುಡುಗ ಬುದ್ಧಿವಂತನಾಗಿರಬೇಕು ಅಂತ ಆ ದೇವರಲ್ಲಿ ಸದಾ ಬೇಡಿಕೊಳ್ಳುತ್ತಿದ್ದೆ ಕಣೆ.
**ಲಲಿತಾ:** ಹೌದಾ? ನಿನ್ನಾಸೆ ಎಂದಿಗೂ ನೆರವೇರುವುದಿಲ್ಲ. ಬುದ್ಧಿವಂತರು ಮದುವೆಯನ್ನೇ ಆಗೋದಿಲ್ಲ ಗೊತ್ತಾ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ


ಸಂಧಿಲಿನ್
SANDHILIN सन्धिलिन



ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ ಹೇಳಿ!




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ–574 118, ಕರ್ನಾಟಕ.
Customer Care: +91 89709 77513
Email: sdmaph@sdmayurvedacollegeudupi.in
https://sdmayupharmacy.com
ISO 9001:22000 & GMP CERTIFIED

U.I.N:KA/044/2021